ಅಧಿಕಾರಿ ಹುದ್ದೆಗಳು ಮತ್ತು ಬೋಧಕ ವರ್ಗದ ಹುದ್ದೆಗಳ ನೇಮಕಾತಿ ವಿಧಾನವನ್ನು ಕೃಷಿ ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿ (ಸ್ಟಾಟೂಟ್) ರೂಪಿಸಲಾಗಿದೆ.

ಆ. ಸಿಬ್ಬಂದಿ ವರ್ಗದ ವರ್ಗ ಮತ್ತು ನೇಮಕಾತಿ ನಿಯಮಾವಳಿ ದಿನಾಂಕ: 15-9-1961ರಿಂದ ಜಾರಿಯಲ್ಲಿದೆ.

ಕೃಷಿ ವಿಶ್ವವಿದ್ಯಾನಿಲಯದ ಅಧಿನಿಯಮ (ಸ್ಟಾಟೂಟ್) ದಿನಾಂಕ: 30-10-1964ರಿಂದ ಜಾರಿಯಲ್ಲಿದೆ.

ಇ. ಹೌದು

ಈ. ಉದ್ಭವಿಸುವುದಿಲ್ಲ.

ಹಾಸನ ಸಿಟಿ ಕೋ– ಆಪರೇಟಿವ್ ಬ್ಯಾಂಕಿನ ಕಟ್ಟಡ ಕಟ್ಟಲು ಮಂಜೂರಾದ ಹಣ

(1990): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ ಆಪರೇಟಿವ್ ಬ್ಯಾಂಕ್, ನಿ. ಹಾಸನ ಕಟ್ಟಡ ಕಟ್ಟಲು ಪ್ರಾರಂಭದಲ್ಲಿ ಎಷ್ಟು ಮೊತ್ತದ ಅಂದಾಜನ್ನು ಮಂಜೂರು ಮಾಡಲಾಗಿತ್ತು;

ಆ. ಈ ಕಟ್ಟಡಕ್ಕೆ ಎಷ್ಟು ಹಣ ಖರ್ಚಾಗಿದೆ;

ಇ. ಈ ಕಟ್ಟಡಕ್ಕೆ ಬೇಕಾದ ಹಣವನ್ನು ಬ್ಯಾಂಕಿನ ಯಾವ ಬಾಬ್ತಿನಿಂದ ಒದಗಿಸಲಾಗಿದೆ;

ಈ. ಕಟ್ಟಡಕ್ಕೆ ಈ ರೀತಿ ಹಣವನ್ನು ಒದಗಿಸಲು ಕಾನೂನಿನಲ್ಲಿ ಅವಕಾಶವಿದೆಯೇ; ವಿವರಣೆ ನೀಡುವುದು;

ಉ. ಕಾನೂನು ಬಾಹಿರ ಕ್ರಮ ನಡೆಸಿದ ಅಧಿಕಾರಿ ವರ್ಗದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಬ್ಯಾಂಕಿನ ಮೂಲ ಅಂದಾಜಿನ ವೆಚ್ಚ ರೂ. 6ಲಕ್ಷಗಳಾಗಿದ್ದು, ಇಲಾಖಾ ವತಿಯಿಂದ ಅಂದಾಜು ವೆಚ್ಚವನ್ನು ಅನುಮೋದಿಸಿರುವುದಿಲ್ಲ.

ಆ. ರೂ. 19,38,673

ಇ. ಈ ಕಟ್ಟಡಕ್ಕೆ ಈ ಕೆಳಗಿನ ಬಾಬ್ತುಗಳಿಂದ ಇಟ್ಟು ರೂ. 19,38,673–00 ಗಳನ್ನು ಖರ್ಚು ಮಾಡಲಾಗಿದೆ.

1. ಕಟ್ಟಡ ನಿಧಿ	1,30,223–00
2. ಆಪದ್ಧನ	5,17,633–00
3. ಬಾಡಿಗೆದಾರರ ಮುಂಗಡ	2,56,303–00
4. ಬ್ಯಾಂಕಿನ ಥಿನನಿತ್ಯದ ದುಡಿಯುವ ಬಂಡವಾಳದಿಂದ	10,25,404–00
ಒಟ್ಟು	19,36,673–00

ಈ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳ ಪ್ರಕಾರ ಸಹಕಾರ ಸಂಘಗಳ ನಿಬಂಧಕರ ಪೂರ್ವಾನುಮತಿ ಮೇರೆಗೆ ಆಪದ್ಧನವನ್ನು ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಿದೆ. ದುಡಿಯುವ ಬಂಡವಾಳವನ್ನು ಇಂತಹ ಕೆಲಸಕ್ಕೆ ಉಪಯೋಗಿಸುವ ಬಗ್ಗೆ ಕಾನೂನಿನಲ್ಲಿ ನಿರ್ದಿಷ್ಟಪಡಿಸಲಾಗಲಿಲ್ಲ.

ಉ. ಆಡಳಿತ ಮಂಡಳಿಯನ್ನು ರದ್ದುಪಡಿಸಿದೆ. ಬ್ಯಾಂಕಿಗಾಗಿರುವ ನಷ್ಟವನ್ನು ಹಾಗೂ ವ್ಯಕ್ತಿಗಳ ಜವಾಬ್ದಾರಿಯನ್ನು ನಿರ್ಧರಿಸಿ ಕ್ರಮಕ್ಕೆಗೊಳ್ಳಲಾಗುವುದು.

ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡಕ್ಕೆ ಬಾಡಿಗೆ ಕಟ್ಟಲು ಮಂಜೂರಾದ ಹಣ

(1990[(ಎ)]) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ನಡೆಯುತ್ತಿರುವ ಕಟ್ಟಡಕ್ಕೆ ತಿಂಗಳಿಗೆ ಎಷ್ಟು ಬಾಡಿಗೆಯನ್ನು ಕೊಡಲಾಗುತ್ತಿದೆ;

ಆ. ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡದ ನೆಲಮಾಳಿಗೆ ಕೆಲಸ ಎಂದು ಪೂರ್ಣವಾಯಿತು;

ಇ. ಸಿಟಿ ಕೋ–ಆಪರೇಟಿವ್ ಬ್ಯಾಂಕಿನ ಕಟ್ಟಡಕ್ಕೆ ಇದುವರೆಗೂ ಬ್ಯಾಂಕಿನಿಂದ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ರೂ. 3,500–00

ಆ. ದಿನಾಂಕ: 2–11–89ರ ಪೂರ್ವ.

ಇ. ಸದರಿ ಕಟ್ಟಡಕ್ಕೆ ಒಟ್ಟು ರೂ. 19,38,673–32 ಗಳು ಬಿಲ್ ರೂಪದಲ್ಲಿ ಮತ್ತು ಮುಂಗಡ ರೂಪದಲ್ಲಿ ದಿನಾಂಕ: 22–3–1991 ವರೆಗೆ ಗುತ್ತಿಗೆದಾರರಿಗೆ ಪಾವತಿಯಾಗಿದೆ.

ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅವ್ಯವಹಾರ

(1991): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಸಿಟಿ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಅನೇಕ ಅವ್ಯವಹಾರಗಳು ನಡೆದಿದ್ದು ಈ ಅವ್ಯವಹಾರಗಳ ನಿಜಾಂಶ ತಿಳಿಯಲು ಸರ್ಕಾರ ಯಾವ ತಾರೀಖಿನಲ್ಲಿ ಕೋ–ಆಪರೇಟಿವ್ ಆಕ್ಟ್‌ನ 64ನೇ ಸೆಕ್ಷನ್ ಪ್ರಕಾರ ವಿಚಾರಣೆಗೆ ಆರ್ಡರ್ ಮಾಡಿತು, ಈ 64ನೇ ವಿಚಾರಣೆಯಿಂದ ಬೆಳಕಿಗೆ ಬಂದ ಅಕ್ರಮಗಳು ಯಾವುವು, ಈ ಅಕ್ರಮಗಳ ಬಗ್ಗೆ ಸರ್ಕಾರವು, ಕ್ರಮ ತೆಗೆದುಕೊಂಡಿದೆ ಏನು ವಿವರ ಕೊಡಿ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 61ರ ಅನ್ವಯ ವಿಚಾರಣೆಯನ್ನು ಶಾಸನ